# ಶುಭವಾರ್ತೆ ಕಥಾಪುಸ್ತಕ

## ಐದು



ಇದು ನನ್ನ ಶುಭವಾರ್ತೆ ಐದನೆ ಕಥಾಪುಸ್ತಕ

ನನ್ನ ಹೆಸರು

---

ನನ್ನ ಶುಭವಾರ್ತೆ ಐದನೆ ಕಥಾಪುಸ್ತಕವನ್ನು
ನಾನು ಓದಬಲ್ಲೆ

ಈ ಕಥೆಗಳನ್ನು ಸೃಷ್ಟಿಕರ್ತನಾದ ದೇವರ ಪವಿತ್ರ ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ.

ಈ ಕಥಾಪುಸ್ತಕದಲ್ಲಿರುವ ಎಲ್ಲ ಚಿತ್ರಗಳನ್ನು ಭಾರತದ ಬುಡಕಟ್ಟು ಮಕ್ಕಳು ಬರೆದಿದ್ದಾರೆ.
ಶುಭವಾರ್ತೆ ಕಥಾಪುಸ್ತಕ ಐದು. ಕಾಪಿರೈಟ್ 2017. ಪ್ರಿಂಟೆಡ್ ಇನ್ ಇಂಡಿಯಾ.
ಹೆಚ್ಚಿನ ವಿಷಯಗಳಿಗಾಗಿ ಸಂಪರ್ಕಿಸಿ:
WBTC India, P.O. Box 8478, Bangalore 560084. Email: info@wbtcindia.com



ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ! ........ 2-19
ನನಗೆ ಕಾಣುತ್ತದೆ ............................ 20-29
ಶಾಂತಿ ಕೊಡುವಾತನು ..................... 30-36

# ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ!

ಸೃಷ್ಟಿಕರ್ತನಾದ ದೇವರು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:
‘ನಾನು ನಿಮ್ಮನ್ನು ಸದಾಕಾಲ ಮತ್ತು
ಎಂದೆಂದಿಗೂ ಕಾಪಾಡುವೆನು.’

ನನಗೆ ಒಬ್ಬ ಯುವತಿ ಕಾಣುತ್ತಿದ್ದಾಳೆ.

ಆಕೆಯ ಹೆಸರು ಮರಿಯ.







ಸೃಷ್ಟಿಕರ್ತನ ಒಳ್ಳೆಯ ಆತ್ಮವು
ಮರಿಯಳಿಗೆ ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

‘ನೀನು ಒಬ್ಬ ಮಗನನ್ನು ಪಡೆಯುವೆ.
ಆತನಿಗೆ ಯೇಸು ಎಂಬ ಹೆಸರಿರುವುದು.

ಯೇಸುವು ಸೃಷ್ಟಿಕರ್ತನಾದ ದೇವರ
ಆತ್ಮನಿಂದ ಹುಟ್ಟಿದವನು.


ಯೇಸು ನಿಮ್ಮನ್ನು ಸದಾಕಾಲ ಮತ್ತು
ಎಂದೆಂದಿಗೂ ಕಾಪಾಡುವನು.’

ಒಬ್ಬ ಯುವಕನು ನನಗೆ ಕಾಣುತ್ತಿದ್ದಾನೆ.

ಅವನ ಹೆಸರು ಯೋಸೇಫ.

ಯೋಸೇಫನ ಪೂರ್ವಿಕರು
ದಾವೀದ ರಾಜನ ಕುಲದವರು.

ದಾವೀದ ರಾಜನು
ಅಬ್ರಹಾಮನ ಕುಲದವನು.







ಸೃಷ್ಟಿಕರ್ತನಾದ ದೇವರು ಒಳ್ಳೆಯ ಆತ್ಮನಿಗೆ
ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಹೋಗಿ ಯೋಸೇಫನಿಗೆ ಮರಿಯಳನ್ನು ತನ್ನ
ಹೆಂಡತಿಯನ್ನಾಗಿ ಮಾಡಿಕೊಳ್ಳಲು ತಿಳಿಸು.

ಮರಿಯಳು ಒಬ್ಬ ಮಗನನ್ನು ಪಡೆಯುವಳು.
ಆತನಿಗೆ ಯೇಸು ಎಂಬ ಹೆಸರಿರುವುದು.

ಯೇಸುವು ಸೃಷ್ಟಿಕರ್ತನಾದ ದೇವರ
ಆತ್ಮನಿಂದ ಹುಟ್ಟಿದವನು.

ಯೇಸು ನಿಮ್ಮನ್ನು ಸದಾಕಾಲ ಮತ್ತು
ಎಂದೆಂದಿಗೂ ಕಾಪಾಡುವನು.’

ಸೃಷ್ಟಿಕರ್ತನಾದ ದೇವರು ಬರುತ್ತಿದ್ದಾನೆ...







ಕಾಲವಾಯಿತು.

ಸೃಷ್ಟಿಕರ್ತನಾದ ದೇವರು ರಾತ್ರಿಯ ಆಕಾಶದಲ್ಲಿ ಹೊಸ ನಕ್ಷತ್ರವನ್ನು ಸೃಷ್ಟಿಸುತ್ತಿರುವುದು ನನಗೆ ಕಾಣುತ್ತಿದೆ.

ಹೊಸ ನಕ್ಷತ್ರವು ಪ್ರಕಾಶಿಸುತ್ತಾ...
ಪ್ರಕಾಶಿಸುತ್ತಾ...ಪ್ರಕಾಶಿಸುತ್ತಾ ಇದೆ.

ಜ್ಞಾನಿಗಳು ರಾತ್ರಿಯ ಆಕಾಶವನ್ನು ನೋಡುತ್ತಾ...
ನೋಡುತ್ತಾ...ನೋಡುತ್ತಾ ಇರುವುದು
ನನಗೆ ಕಾಣುತ್ತಿದೆ.

ಹೊಸ ನಕ್ಷತ್ರವು ಸೂಚಿಸುತ್ತಾ...
ಸೂಚಿಸುತ್ತಾ...ಸೂಚಿಸುತ್ತಾ ಇದೆ.







ಜ್ಞಾನಿಗಳು ಹೊಸ ನಕ್ಷತ್ರವನ್ನು
ಹಿಂಬಾಲಿಸುತ್ತಾ ಚಿಕ್ಕ ಊರಿಗೆ...
ಚಿಕ್ಕ ದಾರಿಯಲ್ಲಿ...ಚಿಕ್ಕ ಗುಡಿಸಲಿಗೆ
ಹೋಗುತ್ತಿರುವುದು ನನಗೆ ಕಾಣುತ್ತಿದೆ.

ಯೋಸೇಫ, ಅವನ ಹೆಂಡತಿ ಮರಿಯಳು
ಮತ್ತು ಚಿಕ್ಕ ಮಗುವಾದ ಯೇಸು
ನನಗೆ ಕಾಣುತ್ತಿದ್ದಾರೆ.

ಸೃಷ್ಟಿಕರ್ತನಾದ ದೇವರು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:
‘ಈ ಚಿಕ್ಕ ಮಗುವಾದ ಯೇಸು
ನಿಮ್ಮನ್ನು ಸದಾಕಾಲ ಮತ್ತು
ಎಂದೆಂದಿಗೂ ಕಾಪಾಡುವನು.’








ಜ್ಞಾನಿಗಳು ಚಿಕ್ಕ ಮಗುವಾದ ಯೇಸುವಿಗೆ
ಹಾಡುತ್ತಿರುವುದು ನನಗೆ ಕಾಣುತ್ತಿದೆ.


ನಿಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ
ಕಾಪಾಡಲು ಸೃಷ್ಟಿಕರ್ತನಾದ ದೇವರು
ಚಿಕ್ಕ ಮಗುವಾಗಿ ಬಂದಿದ್ದಾನೆ.

ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ!



ಅದೇ ರಾತ್ರಿಯಲ್ಲಿ...

ನನಗೆ ಕುರುಬರು ಕಾಣುತ್ತಿದ್ದಾರೆ.
ನನಗೆ ಕುರಿಗಳು ಕಾಣುತ್ತಿವೆ.







ಸೃಷ್ಟಿಕರ್ತನಾದ ದೇವರು ಒಳ್ಳೆಯ
ಆತ್ಮನಿಗೆ ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

'ಹೋಗಿ ಕುರುಬರಿಗೆ, ಭಯಪಡಬೇಡಿ,
ನಾನು ಶುಭವಾರ್ತೆ ಕೊಡುವೆ
ಎಂದು ತಿಳಿಸು. ಯೇಸು ನಿಮ್ಮನ್ನು
ಸದಾಕಾಲ ಮತ್ತು ಎಂದೆಂದಿಗೂ
ಕಾಪಾಡಲು ಇಲ್ಲಿದ್ದಾನೆ.'

ದೊಡ್ಡ, ದೊಡ್ಡ, ದೊಡ್ಡ ಹೊಳೆಯುವ ಬೆಳಕು
ನನಗೆ ಕಾಣುತ್ತಿದೆ.

ದೊಡ್ಡ, ದೊಡ್ಡ, ದೊಡ್ಡ ಹೊಳೆಯುವ ಬೆಳಕು
ಒಳ್ಳೆಯ ಆತ್ಮನಾಗಿರುವುದು ನನಗೆ ಕಾಣುತ್ತಿದೆ.







ಒಳ್ಳೆಯ ಆತ್ಮನು ಕುರುಬರಿಗೆ ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

'ಭಯಪಡಬೇಡಿ, ನಾನು
ಶುಭವಾರ್ತೆ ಕೊಡುವೆನು.

ಯೇಸು ನಿಮ್ಮನ್ನು ಸದಾಕಾಲ ಮತ್ತು
ಎಂದೆಂದಿಗೂ ಕಾಪಾಡಲು ಇಲ್ಲಿದ್ದಾನೆ.'

ಸೃಷ್ಟಿಕರ್ತನಾದ ದೇವರಿಗೆ ಒಂದು...ಎರಡು...
ಮೂರು...ನಾಲ್ಕು...ಐದು...ಆರು...ಏಳು...

ಅನೇಕ, ಅನೇಕ, ಅನೇಕ ಒಳ್ಳೆಯ ಆತ್ಮಗಳು
ಹಾಡುತ್ತಿರುವುದು ನನಗೆ ಕಾಣುತ್ತಿದೆ.







ಅನೇಕ, ಅನೇಕ, ಅನೇಕ ಒಳ್ಳೆಯ
ಆತ್ಮಗಳು ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

‘ಸೃಷ್ಟಿಕರ್ತನಾದ ದೇವರಿಗೆ ಹಾಡಿರಿ.

ಯೇಸುವಿಗೆ ಹಾಡುವ ಪ್ರತಿಯೊಬ್ಬರಿಗೂ
ಶಾಂತಿಯಿರಲಿ.’

ಅನೇಕ, ಅನೇಕ, ಅನೇಕ ಒಳ್ಳೆಯ
ಆತ್ಮಗಳು ಆಕಾಶದೊಳಕ್ಕೆ ಏರಿ...ಏರಿ...ಏರಿ
ಹೋಗುತ್ತಿರುವುದು ನನಗೆ ಕಾಣುತ್ತಿದೆ.

ಕುರುಬರು ಯೇಸುವಿಗೆ ಹಾಡುತ್ತಿರುವುದು
ನನಗೆ ಕಾಣುತ್ತಿದೆ.







ನಿಮ್ಮನ್ನು ಸದಾಕಾಲ ಮತ್ತು
ಎಂದೆಂದಿಗೂ ಕಾಪಾಡಲು
ಸೃಷ್ಟಿಕರ್ತನಾದ ದೇವರು
ಚಿಕ್ಕ ಮಗುವಾಗಿ ಬಂದಿದ್ದಾನೆ.

ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ!


# ನನಗೆ ಕಾಣುತ್ತದೆ

ಅನೇಕ ವರ್ಷಗಳು ಕಳೆದವು.
ಚಿಕ್ಕ ಮಗು ಯೇಸು ಈಗ ಪುರುಷನಾಗಿದ್ದಾನೆ.

ಈ ಹೊತ್ತು ಸಂತೆಯ ದಿನ.

ಊರಿನಲ್ಲಿ ಅನೇಕ ಜನರು
ನನಗೆ ಕಾಣುತ್ತಿದ್ದಾರೆ.

ಒಬ್ಬ ವ್ಯಕ್ತಿ ನನಗೆ ಕಾಣುತ್ತಿದ್ದಾನೆ.
ಅವನು ಕುರುಡ.







ಯೇಸುವಿನ ಹಿಂಬಾಲಕರು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

'ಈ ಕುರುಡನು ಕೆಟ್ಟದ್ದನ್ನು ಮಾಡಿದ್ದರಿಂದ
ಹುಟ್ಟುಕುರುಡನಾಗಿದ್ದಾನೆಯೇ?'

ಯೇಸು ತನ್ನ ಹಿಂಬಾಲಕರಿಗೆ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಇಲ್ಲ, ಅವನು ಹುಟ್ಟುಕುರುಡನಾಗಿರುವುದು ಕೆಟ್ಟದ್ದನ್ನು ಮಾಡಿದ್ದರಿಂದಲ್ಲ.

ಅವನು ಹುಟ್ಟುಕುರುಡನಾಗಿರುವುದು ಸೃಷ್ಟಿಕರ್ತನಾದ ದೇವರ ಶಕ್ತಿಯನ್ನು ನೀವು ಕಾಣಲೆಂದು.

ನಾನು ನಿಮ್ಮನ್ನು ಕಾಪಾಡುವ ಯೇಸು.’







ಯೇಸು ಕುರುಡನನ್ನು ಮುಟ್ಟುತ್ತಿರುವುದು ನನಗೆ ಕಾಣುತ್ತಿದೆ.

ಕುರುಡನಿಗೆ ಈಗ ಕಾಣಿಸುತ್ತಿದೆ.

ಯೇಸು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ನಾನು ಲೋಕಕ್ಕೆ ಬೆಳಕಾಗಿದ್ದೇನೆ.’

ಈಗ ಕಣ್ಣು ಕಾಣಿಸುತ್ತಿರುವ ಕುರುಡನಿಗೆ
ಆತ್ಮಿಕ ನಾಯಕನು ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

'ನಿನ್ನನ್ನು ಮುಟ್ಟಿದ ವ್ಯಕ್ತಿ
ಯಾರೆಂದು ಹೇಳುವೆ?'







ಈಗ ಕಣ್ಣು ಕಾಣಿಸುತ್ತಿರುವ ಕುರುಡನು
ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

'ನನ್ನನ್ನು ಮುಟ್ಟಿದ ವ್ಯಕ್ತಿ ಯೇಸು.

ಯೇಸು ನಿಮ್ಮನ್ನು ಸದಾಕಾಲ ಮತ್ತು
ಎಂದೆಂದಿಗೂ ಕಾಪಾಡಲು ಬಂದಿದ್ದಾನೆ.'

ಈಗ ಕಣ್ಣು ಕಾಣಿಸುತ್ತಿರುವ ಕುರುಡನಿಗೆ
ಆತ್ಮಿಕ ನಾಯಕನು ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

‘ನಿನ್ನನ್ನು ಮುಟ್ಟಿದ ವ್ಯಕ್ತಿ
ಯಾರೆಂದು ಹೇಳುವೆ?’







ಈಗ ಕಣ್ಣು ಕಾಣಿಸುತ್ತಿರುವ ಕುರುಡನಿಗೆ
ಯೇಸು ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

‘ನಾನು ಯಾರೆಂದು ಹೇಳುವೆ?’

ಈಗ ಕಣ್ಣು ಕಾಣಿಸುತ್ತಿರುವ ಕುರುಡನು ಯೇಸುವಿಗೆ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ನೀನು ನಮ್ಮನ್ನು ಸದಾಕಾಲ ಮತ್ತು ಎಂದೆಂದಿಗೂ ಕಾಪಾಡಲು ಬಂದಿರುವೆ.

ನೀನು ಲೋಕಕ್ಕೆ ಬೆಳಕಾಗಿರುವೆ.’







ಯೇಸು ಲೋಕಕ್ಕೆ ಬೆಳಕಾಗಿದ್ದಾನೆ.


ಕತ್ತಲೆಯನ್ನು ಹಿಂದಕ್ಕೆ ತಳ್ಳಲು ಯೇಸುವಿಗೆ ಮಾತ್ರ ಶಕ್ತಿಯಿದೆ.

ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ!

# ಶಾಂತಿ ಕೊಡುವಾತನು

ಮತ್ತೊಂದು ದಿನ, ಮತ್ತೊಂದು ಸಮಯ,
ಮತ್ತೊಂದು ಸ್ಥಳ.

ಒಬ್ಬ ಮನುಷ್ಯ ನನಗೆ ಕಾಣುತ್ತಿದ್ದಾನೆ.
ಅವನ ಹೆಸರು ಸಿಮೋನ.







ಯೇಸುವು ಸಿಮೋನನನಿಗೆ ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ದಯವಿಟ್ಟು ನನ್ನ ಮನೆಗೆ ಬಾ.’

ಸಿಮೋನನ ಮನೆಯೊಳಗೆ ಸಿಮೋನ ಮತ್ತು
ಯೇಸು ಇರುವುದು ನನಗೆ ಕಾಣುತ್ತಿದೆ.


ಸಿಮೋನನ ಮನೆಯೊಳಗೆ ಒಬ್ಬ ಸ್ತ್ರೀ
ಇರುವುದು ನನಗೆ ಕಾಣುತ್ತಿದೆ.

ಆ ಸ್ತ್ರೀ ಅನೇಕ ಕೆಟ್ಟವುಗಳನ್ನು ಮಾಡಿದ್ದಾಳೆ.

ಆ ಸ್ತ್ರೀ ಯೇಸುವಿನ ಪಾದಗಳಿಗೆ
ಅಡ್ಡಬೀಳುತ್ತಿರುವುದು ನನಗೆ ಕಾಣುತ್ತಿದೆ.





ಆ ಸ್ತ್ರೀ ಅಳುತ್ತಿರುವುದು
ನನಗೆ ಕಾಣುತ್ತಿದೆ.

ಆಕೆಯ ಕಣ್ಣೀರು ಯೇಸುವಿನ
ಪಾದಗಳ ಮೇಲೆ ಬೀಳುತ್ತಿದೆ.

ಆ ಸ್ತ್ರೀ ತನ್ನ ಕೂದಲಿಂದ ಯೇಸುವಿನ ಪಾದಗಳನ್ನು ಶುಚಿಮಾಡುತ್ತಿರುವುದು ನನಗೆ ಕಾಣುತ್ತಿದೆ.







ಯೇಸು ಆ ಸ್ತ್ರೀಗೆ ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ನೀನು ಮಾಡಿದ ಕೆಟ್ಟವುಗಳನ್ನೆಲ್ಲ ನಾನು ಕ್ಷಮಿಸುವೆನು.

ಶಾಂತಿಯಿಂದ ಹೋಗು.’

ಯೇಸು ಮಾತ್ರ ಶಾಂತಿ ಕೊಡುತ್ತಾನೆ.

ಕತ್ತಲೆಯನ್ನು ಹಿಂದಕ್ಕೆ ತಳ್ಳಲು
ಯೇಸುವಿಗೆ ಮಾತ್ರ ಶಕ್ತಿಯಿದೆ.

ಸೃಷ್ಟಿಕರ್ತನಾದ ದೇವರು ಇಲ್ಲಿದ್ದಾನೆ!

